ಮಾಡುತ್ತದೆ. ಆರೋಗ್ಯಕ್ಕೂ ಏನೂ ಹಾನಿಯಿಲ್ಲ' ಎಂದು ದಿನಕ್ಕೊಮ್ಮೆಯಾದರೂ ಟೊಂಯಾ ಕುಡಿಯಲು ಬಂದವರಿಗೆ ಹೇಳುತ್ತಿದ್ದ. ಅವನಿಗೆ ಮಕ್ಕಳಿರಲಿಲ್ಲ. ಅದಕ್ಕೆಂದೇ ಇರಬೇಕು ಎಲ್ಲರನ್ನೂ ಮಕ್ಳೆ ಎಂದೇ ಕರೆಯುತ್ತಿದ್ದ. ಅವನ ದೈತ್ಯಗಾತ್ರದ ಮುಂದೆ ಅವನ ಮನೆ ಬಹಳ ಪುಟ್ಟದಾಗಿ ಕಾಣುತ್ತಿತ್ತು. ಅವನು ಮನೆಯೊಳಗಿದ್ದಾಗ ಇವನು ಹೇಗಪ್ಪ ಒಳಗೆ ಬಂದ ಎಂದು ನೋಡುವವರಿಗೆ ಅನ್ನಿಸುತ್ತಿತ್ತು.

ಕುಡಿಯಲು ಬಂದವರು ಒಂದು ಪುಟ್ಟ ಗ್ಲಾಸಿನಲ್ಲಿ ಅವನಿಗೂ ಒಂದಿಷ್ಟು ಹುಯ್ದು ಕೊಡುವುದು ವಾಡಿಕೆ ಎಂಬಂತಾಗಿತ್ತು. ಅವನು ತನ್ನ ಮದ್ಯದ ಅಂಗಡಿಗೆ 'ಗೆಳೆಯರ ಕೂಟ' ಎಂದು ಹೆಸರಿಟ್ಟಿದ್ದ. ಟೊಂಯ ಎಲ್ಲರಿಗೂ ಗೆಳೆಯನಾಗಿದ್ದ. ಗಾತ್ರದಲ್ಲಿ ದೊಡ್ಡವನಾಗಿದ್ದರೂ ಸ್ವಭಾವದಲ್ಲಿ ಬಹಳ ಖುಷಿಯಾಗಿದ್ದು ಸಮಾಧಿಯ ಮೇಲಿನ ಕಲ್ಲೂ ಕೂಡ ನಗುವಂತೆ ಮಾತನಾಡುತ್ತಿದ್ದ. ಯಾರನ್ನೂ ಕಿಂಚಿತ್ತೂ ನೋಯಿಸುತ್ತಿರಲಿಲ್ಲ. ಅವರು ಕೊಟ್ಟ ಮದ್ಯವನ್ನು ಸಾಕು, ಬೇಡವೆನ್ನದೆ ಒಳಗೆ ಸುರಿದುಕೊಳ್ಳುತ್ತಿದ್ದ. ಆ ಪುಟ್ಟ ಗ್ಲಾಸನ್ನು ಬಾಯಿಗೆ ಎತ್ತಿಕೊಳ್ಳುತ್ತಿರುವಾಗ ಅವನ ಕಣ್ಣುಗಳಲ್ಲಿ ಮಿನುಗುತ್ತಿದ್ದ ಆನಂದವನ್ನು ನೀವೊಮ್ಮೆ ನೋಡಬೇಕಿತ್ತು. ತನ್ನ ಮದ್ಯವನ್ನೇ ಇನ್ನ್ಯಾರೋ ದುಡ್ಡು ತೆತ್ತು ತನಗೇ ಕುಡಿಸುವುದು ಅವನಿಗೆ ವಿಚಿತ್ರ ಸಂತೋಷವನ್ನುಂಟುಮಾಡುತ್ತಿತ್ತು.

ಅವನಿಗೆ ಮಕ್ಕಳಿಲ್ಲದಿರುವುದು ಬಹಳಷ್ಟು ಜನರಿಗೆ ಬೇಸರವಷ್ಟೇ ಅಲ್ಲ ಕುತೂಹಲ ಕೂಡ ಇತ್ತು. ಯಾರೋ ಒಬ್ಬ ಕೇಳಿಯೇ ಬಿಟ್ಟ.

'ನನ್ಹೆಂಡ್ತಿ ಸರಿ ಇಲ್ಲ ಕಣ ಮಗಾ!' ಕಣ್ಣು ಮಿಟುಕಿಸುತ್ತಾ ಹೇಳುತ್ತಿದ್ದ ಟೊಂಯಾ. ಕುಡಿಯಲು ಬಂದವರಿಗೆ ಯಾವತ್ತೂ ಟೊಂಯಾನ ಮತ್ತು ಅವನ ಹೆಂಡತಿಯ ಜಗಳ ಒಂದು ಅತಿರಿಕ್ತ ಮನರಂಜನೆಯಾಗಿರುತ್ತಿತ್ತು. ಮುವ್ವತ್ತು ವರ್ಷಗಳ ದಾಂಪತ್ಯ ಜೀವನದಲ್ಲಿ ಅವರು ಜಗಳವಾಡದ ದಿನಗಳೇ ಇರಲಿಲ್ಲ! ಆದರೆ ಟೊಂಯಾ ಆ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಂಡಿರಲಿಲ್ಲ. ಅವನ ಹೆಂಡತಿ ಯಾವಾಗಲೂ ವಟಗುಟ್ಟುತ್ತಲೇ ಇರುತ್ತಿದ್ದಳು. ಅವಳೋ, ದೈಹಿಕವಾಗಿ ಅವನಿಗೆ ತದ್ವಿರುದ್ಧಳಾಗಿದ್ದಳು. ಕಡ್ಡಿಯಂತೆ ತೆಳ್ಳಗೆ ಕೋಲಿನಂತೆ ಉದ್ದಕ್ಕಿದ್ದು, ಹದ್ದಿನ ಮೂಗನ್ನು ಹೊಂದಿದ್ದು ಸ್ವಭಾವದಲ್ಲಿ ಶೂರ್ಪನಖಿಯಾಗಿದ್ದಳು. ದಿನವಿಡೀ ಮನೆಯ ಹಿಂಭಾಗದಲ್ಲಿದ್ದ ಕೋಳಿಗೂಡಿನಲ್ಲೇ ಇರುತ್ತಿದ್ದಳು. ಅವಳ ದಷ್ಟಪುಷ್ಟ ಹೇಂಟೆಗಳಿಗೆ ತುಂಬಾ ಬೇಡಿಕೆಯಿತ್ತು.

ಅವಳಿಗೆ ಯಾರನ್ನು ಕಂಡರೂ ಆಗುತ್ತಿರಲಿಲ್ಲ, ಎಲ್ಲರಿಗಿಂತ ಮಿಗಿಲಾಗಿ ಟೊಂಯಾನಿಗೆ! ಸಿಟ್ಟು ಅವಳ ಮೂಗಿನ ತುದಿಯಲ್ಲೇ ಹೊಗೆಯಾಡುತ್ತಿರುತ್ತಿತ್ತು. ಅವನ ಜೀವನೋತ್ಸಾಹ, ಆರೋಗ್ಯ ಕುರಿತು ಬೆನ್ನು ತಟ್ಟುತ್ತಿರುವವರನ್ನು ಕಂಡು ಅವಳು ಅಸೂಯೆಯಿಂದ ಉರಿದು ಹೋಗುತ್ತಿದ್ದಳು. ಕಿಂಚಿತ್ತೂ ಬೆವರಿಳಿಸದೆ ಅವನು ದುಡ್ಡು ಮಾಡುತ್ತಿರುವುದು, ಹತ್ತು ಜನರು ತಿನ್ನುವುದಷ್ಟನ್ನು ತಿಂದು, ಕುಡಿಯುವುದಷ್ಟನ್ನು ಕುಡಿದು ತೇಗುತ್ತಿರುವುದನ್ನು ಕಂಡು ಅವಳು ಉರಿದುಹೋಗುತ್ತಿದ್ದಳು.

'ನೀನು ಆ ಹಂದಿಗಳ ಜತೆ ವಾಸಿಸಲಷ್ಟೇ ಯೋಗ್ಯನಾದವನು... ಥೂ!.. ಆ ನಿನ್ನ ಗುಡಾಣದಂತ ಹೊಟ್ಟೆಯನ್ನು ನೋಡಿದಾಗ ನನಗೆ ವಾಕರಿಗೆ ಬರುತ್ತೆ! ಥತ್ ನಿನ್ನ ಜನ್ಮಕ್ಕಿಷ್ಟು, ಅದರ ಮೇಲೆ ನಗಾಡ್ತಿಯಾ! ನಿನ್ ಡೊಳ್ಳೊಟ್ಟೆ ಒಂದಿನ ಗೋಧಿ ಚೀಲ ಒಡೆದು ಹೋದಂತೆ ಒಡೆದು ಹೋಗದಿದ್ದರೆ ಕೇಳು!'